**ಪತ್ರಿಕಾ ಪ್ರಕಟಣೆ: ಮೇ1, 2017**

# ಎಡಿಬಿಯ 50 ವರ್ಷಗಳ ಸಂಭ್ರಮಾಚರಣೆಗೆ ಉತ್ತರವಾಗಿ ಈ ವಾರ ಭಾರತದ 100 ಸ್ಥಳಗಳಲ್ಲಿ ಪ್ರತಿಭಟನೆ

**ನವದೆಹಲಿ:** ಏಷ್ಯನ್ ಡೆವಲೆಪ್‌ಮೆಂಟ್ ಬ್ಯಾಂಕ್ (ಎಡಿಬಿ) ಸಂಸ್ಥಾಪನೆಯ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಾರ್ಮಿಕ ದಿನದಿಂದ ಆರಂಭಿಸಿ ಒಂದು ವಾರ ಪ್ರತಿಭಟನಾ ಚಳವಳಿಗಳು ನಡೆಯಲಿವೆ. ಜನಾಂದೋಲನ ಚಳುವಳಿಗಳು ಮತ್ತು ಸಾಮಾಜಿಕ ನಾಗರಿಕ ಸಂಘಟನೆಗಳು ದೇಶದಾದ್ಯಂತ ಭಾರತದ 21 ರಾಜ್ಯಗಳಲ್ಲಿ 2017 ಮೇ 1ರಿಂದ 7ರವರೆಗೆ 100ಕ್ಕೂ ಅಧಿಕ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದಾರೆ. ಸಾಮಾಜಿಕವಾಗಿ ಮತ್ತು ಪರಿಸರಾತ್ಮಕವಾಗಿ ವಿನಾಶಕಾರಿ ಅಭಿವೃದ್ಧಿಯ ಮಾದರಿ ಸೃಷ್ಟಿಸಲು ಕಾರಣವಾಗಿರುವ ಎಡಿಬಿ ಮತ್ತು ಇತರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು (ಐಎಫ್‌ಐಗಳು) ಪ್ರಾಯೋಜಿಸಿರುವ ಯೋಜನೆಗಳು ಸೃಷ್ಟಿಸಿರುವ ಒಟ್ಟಾರೆ ಮಾನವ ಹಕ್ಕುಗಳ ಉಲ್ಲಂಘನೆ, ಜೀವನೋಪಾಯದ ನಷ್ಟ ಮತ್ತು ಪರಿಸರ ನಾಶದ ವಿಚಾರಗಳಲ್ಲಿ ಮುಖ್ಯವಾಗಿ ಈ ಪ್ರತಿಭಟನಾ ಕ್ರಿಯಾಸೂಚಿಗಳು ಜನಜಾಗೃತಿ ಮೂಡಿಸಲಿವೆ. ಸಾಮಾಜಿಕ ಪರಂಪರೆ ಮತ್ತು ಪರಿಸರ ನಾಶದ ಅಭಿವೃದ್ಧಿಯ ಯೋಜನೆಗಳನ್ನು ಸಾರ್ವಜನಿಕ ಹಣವನ್ನು ಬಳಸಿ ಮಾಡಲಾಗಿದ್ದು, ಎಡಿಬಿ ಮತ್ತು ಇತರ ಹಣಕಾಸು ಸಂಸ್ಥೆಗಳಲ್ಲಿ ಅಧಿಕ ಷೇರನ್ನು ಹೊಂದಿರುವ ಶ್ರೀಮಂತ ರಾಷ್ಟ್ರಗಳಿಗೆ ಇದರಿಂದ ಲಾಭವಾಗಿದೆ.

ಮೇ ಮೊದಲ ವಾರದಲ್ಲಿ ಸಂಘಟನೆಗಳು ಸಾರ್ವಜನಿಕ ಬೊಕ್ಕಸದಿಂದ ಹಣ ಪಡೆಯುವ ಮತ್ತು ಶ್ರೀಮಂತ ಖಾಸಗಿ ಕಂಪನಿಗಳನ್ನು ಶ್ರೀಮಂತಗೊಳಿಸುವ ಎಡಿಬಿಯ ನವ ಉದಾರವಾದಿ ಬಂಡವಾಳಶಾಹಿ ಆರ್ಥಿಕ ಪ್ರಗತಿಯ ವಿಫಲ ಮಾದರಿಯನ್ನು ಬಹಿರಂಗಪಡಿಸುವ ಬಹುಮುಖ ಕಾರ್ಯಕ್ರಮಗಳನ್ನು ನಡೆಸಲಿವೆ. ಇದಕ್ಕೆ ಹೆಚ್ಚುವರಿಯಾಗಿ ಎಡಿಬಿ ಮತ್ತು ಇತರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು (ಐಎಫ್‌ಐಗಳು) ಹಣಕಾಸು ನೀಡಿರುವ ಅಥವಾ ಬೆಂಬಲ ನೀಡಿರುವ ಯೋಜನೆಗಳಲ್ಲಿ ಬದ್ಧತೆ ಮತ್ತು ಪಾರದರ್ಶಕತೆಯ ಕೊರತೆಯ ವ್ಯವಸ್ಥೆಗೆ ಸಂಬಂಧಿತ ವಿಷಯಗಳ ಬಗ್ಗೆಯೂ ಪ್ರತಿಭಟನೆಗಳಲ್ಲಿ ಬೆಳಕು ಚೆಲ್ಲಲಾಗುವುದು.

ಹಲವು ರಾಜ್ಯಗಳಲ್ಲಿ ಆರ್ಥಿಕವಾಗಿ ಕೆಳವರ್ಗದ ಶ್ರಮಿಕ ಸಮುದಾಯವನ್ನು ಪ್ರತಿನಿಧಿಸುವ ಕಾರ್ಮಿಕ ಆಯೋಗವಾಗಿರುವ ರಾಷ್ಟ್ರೀಯ ತಿರುಗು ವ್ಯಾಪಾರಿ (ಹಾಕರ್) **ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಶಕ್ತಿಮಾನ್ ಘೋಷ್** ಹೇಳಿರುವ ಪ್ರಕಾರ, ಎಡಿಬಿ ಪ್ರಾಯೋಜಿಸಿದ ಅಭಿವೃದ್ಧಿ ಮಾದರಿಯು ಜೀವನೋಪಾಯದ ನಷ್ಟಕ್ಕೆ ಕಾರಣವಾಗಿದೆ ಮತ್ತು ಹಲವಾರು ನಗರಗಳಲ್ಲಿ ಬೀದಿಬದಿಯ ವ್ಯಾಪಾರಿಗಳ ಉದ್ಯೋಗವನ್ನೇ ಕಸಿದುಕೊಂಡಿದೆ. ಆ ಮೂಲಕ ಅವರನ್ನು ಬಡತನಕ್ಕೆ ನೂಕಿದೆ. ಹೀಗಾಗಿ ಎಡಿಬಿ ಹೇಳಿರುವ 'ತನ್ನದು ಬಡತನದ ವಿರುದ್ಧ ಹೋರಾಟ' ಎನ್ನುವ ಉದ್ದೇಶಕ್ಕೆ ತದ್ವಿರುದ್ಧವಾದ ಕೆಲಸವಾಗಿದೆ. ನಗರ ಪ್ರದೇಶಗಳಲ್ಲಿ ಬೀದಿ ಬೀದಿ ತಿರುಗಿ ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳಿಗೆ ಅತೀ ಹೆಚ್ಚು ನಷ್ಟವಾಗಿದೆ. ಸೇವೆಗಳ ಖಾಸಗೀಕರಣ ಹೆಚ್ಚಾಗುತ್ತಿದ್ದಂತೆ ಮಧ್ಯಮವರ್ಗದವರೂ ಇದೇ ನಷ್ಟವನ್ನು ಎದುರಿಸಲಿದ್ದಾರೆ. ***(ಅವರ ವಿಡಿಯೋ ಸಂದೇಶದ ವಿಡಿಯೋ ನೋಡಿ:*****https://youtu.be/LguAaY4Lwvo*****)***

ಜಪಾನ್‌ನಲ್ಲಿ ಎಡಿಬಿಯು 50ನೇ ವಾರ್ಷಿಕೋತ್ಸವ ಸಂಭ್ರಮಾಚರಣೆ ನಡೆಸುವ ಸಂದರ್ಭದಲ್ಲಿ ಮೇ 1ರಿಂದ 7ರವರೆಗೆ ಪ್ರತಿಭಟನಾ ಕಾರ್ಯಕ್ರಮಗಳನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗುವುದು. ಪ್ರತಿಭಟನೆಗಳು, ಸಾರ್ವಜನಿಕ ಮಾತುಕತೆಗಳು ಅಥವಾ ಉಪನ್ಯಾಸ ಸರಣಿಗಳು, ವೆಬ್ ಚಾಟ್‌ಗಳು, ರೇಡಿಯೋ ಟಾಕ್‌ಶೋಗಳು ಇತ್ಯಾದಿಗಳನ್ನು ಆಯೋಜಿಸಲಾಗುವುದು. ಇವೆಲ್ಲ ಕಾರ್ಯಕ್ರಮಗಳ ಮೂಲಕ ಎಡಿಬಿ ಆಧಾರಿತ ಕಾರ್ಯಕ್ರಮಗಳಿಂದ ಆಗಿರುವ ಗಂಭೀರ ಪರಿಣಾಮಗಳತ್ತ ಗಮನ ಸೆಳೆಯಲಾಗುವುದು. ಎಡಿಬಿ ಭಾರತಕ್ಕೆ ಬಂದ ಮೊದಲ ದಶಕದಲ್ಲಿ 3 ಬಿಲಿಯನ್ ಡಾಲರ್‌ಗಳನ್ನಷ್ಟೇ ಸಾಲವಾಗಿ ನೀಡಿತ್ತು. ಆದರೆ ಕಳೆದ ದಶಕದಲ್ಲಿ 123 ಬಿಲಿಯನ್ ಡಾಲರ್ ಸಾಲವನ್ನು ನೀಡಿದೆ. ಹೀಗಾಗಿ ಬ್ಯಾಂಕಿನ ಆರ್ಥಿಕ, ಸಾಮಾಜಿಕ ಪರಿಸರದ ನೀತಿಗಳಿಂದ ಆಗಿರುವ ನಷ್ಟಗಳು ಅತೀ ಮಹತ್ವದ್ದಾಗಿದೆ.

ಹಿಮಾಚಲ ಪ್ರದೇಶದ ಬಿಲಾಸ್‌ಪುರದಿಂದ ಕೇರಳದ ತಿರುವನಂತಪುರದವರೆಗೆ ಮತ್ತು ಗುಜರಾತ್‌ನ ಮುಂದ್ರಾದಿಂದ ಅಸ್ಸಾಂನ ದಿಬ್ರುಗಡ್‌ವರೆಗೆ ಈ ಕಾರ್ಯಕ್ರಮಗಳು ದೇಶದಾದ್ಯಂತ ನಡೆಯಲಿವೆ. ಅಂತರರಾಷ್ಟ್ರೀಯ ಹಣಕಾಸು ಸಹಾಯದಿಂದ ಆಗುವ ಕೆಟ್ಟ ಪರಿಣಾಮಗಳ ಕುರಿತಾಗಿ ಕೆಲಸ ಮಾಡುವ ನಾಗರಿಕ ಚಳವಳಿಗಳು ಮತ್ತು ನಾಗರಿಕ ಸಾಮಾಜಿಕ ಸಂಘಟನೆಗಳಿಗೆ ಪ್ರತಿಭಟನೆಗೆ ಬೇಕಾಗಿರುವ ತಳಹದಿಯನ್ನು ಅಂತರರಾಷ್ಟ್ರೀಯ ಹಣಕಾಸು ಸಂಘಟನೆಗಳ ವಿರುದ್ಧದ ನಾಗರಿಕ ವೇದಿಕೆ ರೂಪಿಸಿ ಕೊಟ್ಟಿವೆ. ಈ ವೇದಿಕೆಯು ಈ 100ಕ್ಕೂ ಅಧಿಕ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿದೆ. ಆದರೆ ಈ ಕಾರ್ಯಕ್ರಮಗಳನ್ನು ಸ್ಥಳೀಯರಿಗೆ ಪ್ರಸ್ತುತವೆನಿಸುವ ರೀತಿಯಲ್ಲಿ ಸ್ಥಳೀಯ ಸಂಘಟನೆಗಳೇ ಆಯೋಜಿಸುತ್ತಿವೆ. ಸ್ಥಳೀಯರ ಹೋರಾಟಗಳು/ ವಿಷಯಗಳತ್ತ ಗಮನ ಸೆಳೆಯಲು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಅನುದಾನ ನೀಡಿರುವ ಯೋಜನೆಗಳಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ನಿರೀಕ್ಷಿಸುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಕಳೆದ ಒಂದು ದಶಕಕ್ಕೆ ಅವರ ಘೋಷಣೆಯು **"ಎಡಿಬಿ ಇಲ್ಲದಿರುವುದೇ ಒಳಿತು"** ಎನ್ನುವುದೇ ಆಗಿದೆ.

"ಎಡಿಬಿ ಭಾರತದಲ್ಲಿ ತನ್ನ ಜಲಯೋಜನೆಗಳಿಗೆ ಒತ್ತು ನೀಡುತ್ತಿರುವುದನ್ನು ಗಂಭೀರವಾಗಿ ವಿಶ್ಲೇಷಿಸಲೇಬೇಕು. ಮುಖ್ಯವಾಗಿ ಹಿಮಾಲಯದಲ್ಲಿ ಸ್ವಚ್ಛ ಇಂಧನ ಕಾರ್ಯಕ್ರಮದ ಹೆಸರಿನಲ್ಲಿ ಇಂತಹ ಕಾರ್ಯಕ್ರಮಗಳು ಪರಿಸರ ಮತ್ತು ಸಾಮಾಜಿಕ ನಷ್ಟಕ್ಕೆ ಕಾರಣವಾಗಲಿವೆ. ಹೀಗಾಗಿ ಬ್ಯಾಂಕ್ ಪರಿಸರ ಮತ್ತು ಸಾಮಾಜಿಕವಾಗಿ ಯಾವುದನ್ನು ರಕ್ಷಿಸುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತಿದೆಯೋ, ಅದರಲ್ಲಿ ಸಂಪೂರ್ಣ ವಿಫಲವಾಗಿರುವುದು ಕಂಡುಬರುತ್ತದೆ" ಎಂದು ಹಿಮಧಾರಾ ಪರಿಸರ ಸಂಶೋಧನೆ ಮತ್ತು ಸಮಗ್ರ ಕಾರ್ಯಸೂಚಿಯ ಮಾನ್ಶಿ ಆಶರ್ ಅಭಿಪ್ರಾಯಪಡುತ್ತಾರೆ. "ಅಲ್ಲದೆ ಈ ಯೋಜನೆಗಳ ವೆಚ್ಚವು ಏರುತ್ತಿರುವುದು ಸಹ ಜಲವಿದ್ಯುತ್ ಯೋಜನೆಗಳ ಹಣಕಾಸು ಲಾಭದ ಮೇಲೆ ಪ್ರಶ್ನಾಚಿಹ್ನೆಯನ್ನು ಎತ್ತಿದೆ" ಎಂದೂ ಅವರು ಹೇಳಿದ್ದಾರೆ. ***(ವಿಡಿಯೋ ಸಂದೇಶ: : https://youtu.be/iYkVNQFrDgI)***

ಎಡಿಬಿಯ ಹೂಡಿಕೆಗಳು ಸ್ಥಳೀಯ ಆಡಳಿತ ಸಂಸ್ಥೆಗಳು ಮತ್ತು ಇತರ ಪಾರಂಪರಿಕ ಸಂಸ್ಥೆಗಳನ್ನು ಕಡೆಗಣಿಸಿರುವುದು ಹಲವು ಬಾರಿ ಪದೇ ಪದೇ ಗಣನೆಗೆ ಬಂದಿದೆ. "ನಮ್ಮ ಹಕ್ಕುಗಳನ್ನು ನಿರಾಕರಿಸಿ ಸಂಸ್ಕೃತಿ ಮತ್ತು ಸಮುದಾಯಗಳನ್ನು ನಾಶಪಡಿಸುವ ಸೊಕ್ಕಿನ ವರ್ತನೆಯನ್ನು ಎಡಿಬಿ ತೋರಿಸಿದೆ. ನಾವು ಈಶಾನ್ಯದ ಮೂಲನಿವಾಸಿಗಳು ನಮ್ಮ ಹಕ್ಕುಗಳನ್ನು ಕೇಳುವಷ್ಟರ ಮಟ್ಟಿಗೆ ಏಕತೆಯನ್ನು ಮೆರೆದಿದ್ದೇವೆ ಮತ್ತು ನಮ್ಮ ಜೀವನದ ಹಾದಿಯಲ್ಲಿ ಅದನ್ನು ಪ್ರಕಟಿಸಿದ್ದೇವೆ ಎನ್ನುವ ನಂಬಿಕೆಯನ್ನು ಹೊಂದಿದ್ದೇವೆ ಮತ್ತು ಅತ್ಯಧಿಕ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳುವ ಎಡಿಬಿಯಂತಹ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಅಗತ್ಯ ನಮಗೆ ಬೇಕಾಗಿಲ್ಲ. ನಾವು ಮೂರ್ಖರಲ್ಲ. ನಮ್ಮ ಭೂಮಿ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ನಮ್ಮಿಂದಾಗುವ ಪ್ರಯತ್ನವನ್ನು ಮಾಡುತ್ತೇವೆ" ಎನ್ನುತ್ತಾರೆ ಮಣಿಪುರದ ಇಂಡೀಜಿನಿಯಸ್ ಪರ್ಸ್ಪೆಕ್ಟೀವ್ಸ್ (Indigenous Perspectives, Manipur)ನ ಯುಮ್ನಂ ರತಿಕಾ.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಇತರ ಸಾಲ ಕೊಡುವ ಸಂಸ್ಥೆಗಳ ಮೇಲೆ ಹೊಂದಿರುವ ಪ್ರಮಾಣತಪ್ಪಿದ ಪ್ರಭಾವದತ್ತ ಮುಖ್ಯವಾಗಿ ಗಮನ ಸೆಳೆದ ಬೆಂಗಳೂರಿನ ಪರಿಸರ ಬೆಂಬಲ ಸಮೂಹ (ಇಎಸ್‌ಜಿ)ಯ ಲಿಯೋ ಸಾಲ್ಡಾನ ಅವರು ಹೇಳುವಂತೆ, "ಸಾಲ ಸ್ವೀಕರಿಸುವ ದೇಶಗಳಿಂದ ಬರುವ ಆದಾಯವು ಬ್ಯಾಂಕಿನ ಷೇರುಗಳನ್ನು ನಿಯಂತ್ರಿಸುವ ದೇಶಗಳ ಬೊಕ್ಕಸಕ್ಕೆ ಹೋಗುವುದನ್ನು ಖಾತರಿಪಡಿಸುವ ಅಭಿವೃದ್ಧಿಯ ರೂಪುರೇಷೆಯನ್ನು ಪ್ರಭಾವಿಸುವ ಪಾತ್ರವನ್ನು ಎಡಿಬಿ ಯಾವಾಗಲೂ ಮಾಡಿದೆ. ಉದಾಹರಣೆಗೆ, ಎಡಿಬಿ ಭಾರತದಲ್ಲಿ ಮೆಟ್ರೋ ಯೋಜನೆಗಳಿಗೆ ಉತ್ತೇಜನ ನೀಡಿದೆ. ಈ ಅತಿ ವೆಚ್ಚದ ಮೆಗಾ ಯೋಜನೆಗಳು ಎಲ್ಲಾ ನಗರಗಳಲ್ಲೂ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕ ಸಾರಿಗೆ ಒತ್ತಡದ ನಿಜವಾದ ಸಮಸ್ಯೆಯನ್ನು ಇದು ನೀಗಿಸುತ್ತಿದೆ ಎನ್ನುವ ಸಂದರ್ಭದಲ್ಲಿ ಬ್ಯಾಂಕ್ ಅನುದಾನ ಕೊಡಲು ಹಿಂದೆ ಸರಿಯಿತು. ಆದರೆ ಅದೇ ಸಂದರ್ಭದಲ್ಲಿ ಜಪಾನ್ ಬ್ಯಾಂಕ್ ಮತ್ತು ಜಿಐಸಿಎ ತನ್ನ ಹಾದಿಯನ್ನು ಸುಗಮಗೊಳಿಸಿ ಬೆಂಗಳೂರು ಮೆಟ್ರೋ ಯೋಜನೆಗೆ ಹಣಕಾಸು ಹೂಡಲು ಮುಂದೆ ಬಂತು. ಕುತೂಹಲವೆಂದರೆ **ಈ ಯೋಜನೆಯು ಶೇ.300ರಷ್ಟು ಅಧಿಕ ವೆಚ್ಚದಲ್ಲಿ ನಡೆದರೂ ಕಾರ್ಯರೂಪಕ್ಕೆ ಬಂದಿಲ್ಲ.** ಈ ನಡುವೆ ಸಂಪೂರ್ಣ ನಗರವೇ ಒಂದು ಗೊಂದಲದ ಗೂಡಾಗಿ ಒಂದು ಕಾಲದಲ್ಲಿ ಉದ್ಯಾನ ನಗರಿಯಾಗಿದ್ದ ಬೆಂಗಳೂರು ಮಾಯವಾಗಿ ಹೋಗಿದೆ!"

ಕರಾವಳಿ ಗುಜರಾತ್ ವಿದ್ಯುತ್ ಲಿಮಿಟೆಡ್ (ಟಾಟಾ ಮುಂದ್ರ) ಎನ್ನುವುದು ಒಂದು 4 ಬಿಲಿಯನ್ ಡಾಲರ್‌ನ, 4000 ಮೆಗಾವ್ಯಾಟ್ ಕಲ್ಲಿದ್ದಲು ಆಧರಿತ ಉಷ್ಣ ಸ್ಥಾವರ ವಿದ್ಯುತ್ ಘಟಕವಾಗಿ ಗುಜರಾತ್‌ನ ಕಚ್‌ನಲ್ಲಿದೆ. ಎಡಿಬಿ ಸಹ ಹಣಕಾಸು ನೀಡುವ ಯೋಜನೆಗಳಲ್ಲಿ ಇದೂ ಒಂದಾಗಿದ್ದು, ಪರಿಸರ ಮತ್ತು ಜನರಿಗೆ ಅತಿಯಾದ ನಷ್ಟವನ್ನು ತಂದಿದೆ. ಅದರದ್ದೇ ಆದ ಜವಾಬ್ದಾರಿ ಕಾರ್ಯಸೂಚಿಯಾಗಿರುವ ಕಾಂಪ್ಲಿಯನ್ಸ್ ರಿವ್ಯೂ ಪ್ಯಾನಲ್ ದೃಢಪಡಿಸಿರುವಂತೆ, ಈ ಯೋಜನೆಯು ಎಡಿಬಿಯ ಸಮುದಾಯಗಳ ಜೊತೆಗೆ ಸಲಹೆಗಳನ್ನು ಪಡೆದು ಕೆಲಸ ಮಾಡುವ ಕಾರ್ಯನೀತಿಯನ್ನು ಉಲ್ಲಂಘಿಸಿದೆ. ಅಲ್ಲದೆ ಈ ಯೋಜನೆಗೆ ಅಂಗೀಕಾರ ನೀಡುವಾಗ ಸಾಮಾಜಿಕ ಪರಿಣಾಮ ವಿಶ್ಲೇಷಣೆಯನ್ನು ನಡೆಸಿಲ್ಲ. ಇದರ ಪರಿಣಾಮವಾಗಿ ಪ್ರಾಂತದಲ್ಲಿ ಮೀನುಗಾರಿಕೆ ಮೇಲೆ ತೀವ್ರ ಪರಿಣಾಮವಾಗಿದೆ. ಸಾವಿರಾರು ಮೀನುಗಾರರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಎರಚಿದೆ.

"ಮೀನುಗಾರರ ಜೀವನೋಪಾಯಕ್ಕೆ ಪುನಶ್ಚೇತನ ನೀಡುವಂತೆ ಎಡಿಬಿ ಮುಂದೆ ನಾವಿಟ್ಟಿರುವ ಬೇಡಿಕೆಗೆ ಅದು ಕಿವುಡಾಗಿದೆ. ಬ್ಯಾಂಕಿನ ಅಸ್ತಿತ್ವದ 50 ವರ್ಷಗಳ ಸಂಭ್ರಮಾಚರಣೆಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ಮುಂದ್ರಾದ ಮೀನುಗಾರರು ತಮ್ಮ ಜೀವನದ ಅಗತ್ಯಗಳಿಗಾಗಿ ಪರದಾಡುತ್ತಿದ್ದಾರೆ" ಎಂದು ಮಚಿಮರ್ ಅಧಿಕಾರ್ ಸಂಘರ್ಷ್ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಭರತ್ ಪಟೇಲ್ ಹೇಳುತ್ತಾರೆ.

*(ವಿಡಿಯೋ ಸಂದೇಶ: :* **https://youtu.be/3OePpbHqKIo***)*

ಈ 100ಕ್ಕೂ ಅಧಿಕ ಕಾರ್ಯಕ್ರಮಗಳು, ನಾಗರಿಕ ಚಳವಳಿಗಳು ಮತ್ತು ಇತರ ಸಿಎಸ್‌ಒಗಳು ಎಡಿಬಿ ತನ್ನ ಹಾದಿಯನ್ನು ಸರಿಪಡಿಸಿಕೊಂಡು ಪಾರದರ್ಶಕ ಮತ್ತು ತಾನು ಯಾರ ಹೆಸರಿನಲ್ಲಿ ಕೆಲಸ ಮಾಡುತ್ತಿದೆಯೋ ಆ ಜನರ ಕುರಿತ ಜವಾಬ್ದಾರಿ ಹೊಂದಿರುವ ಉದ್ಯಮವಾಗಿ ಮುಂದುವರಿಯಬೇಕು ಎಂದು ಬೇಡಿಕೆ ಇಡುತ್ತಿವೆ. ಇದಕ್ಕೆ ತಪ್ಪಿದಲ್ಲಿ ಜನರು ತಮ್ಮ ಹೋರಾಟವನ್ನು ತೀವ್ರಗೊಳಿಸುವುದರ ಹೊರತು ಬೇರೆ ಆಯ್ಕೆಗಳೇ ಇಲ್ಲ. ಪ್ರತಿಭಟನೆಯ ಹಕ್ಕನ್ನು ತಡೆಯುವುದು, ಅಭಿವ್ಯಕ್ತ ಸ್ವಾತಂತ್ರ್ಯಕ್ಕೆ ಅಡ್ಡಿ ಮತ್ತು ಸಭೆ ಸೇರುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ದಮನಕಾರಿ ಕಾನೂನುಗಳು ಹೆಚ್ಚುತ್ತಿದ್ದರೂ ದಿಟ್ಟವಾಗಿ ಎದುರಿಸಲು ಸಂಘಟನೆಗಳು ಸಿದ್ಧವಾಗಿವೆ.

ಕಾರ್ಯಸ್ಥಳಗಳ ವಿವರ: https://wgonifis.net/places-of-action/

ಎಡಿಬಿ (ADB) ಗೆ ವಿಡಿಯೋ ಸಂದೇಶ: https://wgonifis.net/videos/

**ಸಂಪರ್ಕಿಸಿ:**

ಪ್ರಿಯಾ ದರ್ಶಿನಿ, priya@cenfa.org Cell: +91-96546 80488

ರಾಜೇಶ್ ಕುಮಾರ್, rajesh@cenfa.org Cell: +91-81300 30411

ಅಂಕಿತ್ ಅಗರವಾಲ್, ಮಾಧ್ಯಮ ಸಂಚಾಲಕರು, ankit@cenfa.org Cell: +91-95603 61801

**ವೆಬ್‌ಸೈಟ್ (Website): https://wgonifis.net**

**ಟ್ವಿಟರ್ (Twitter): @wgonifis**

**ಇ–ಮೇಲ್ (Email): wgonifis@gmail.com**

----